# ತರಗತಿಯ ಚಟುವಟಿಕೆಗಳು

## ರಜನಿ ದ್ವಿವೇದಿ

**ಚಟುವಟಿಕೆ 1:** ನಿಸ್ಸಂದಿಗ್ಧ ಅಥವಾ ಸಂದಿಗ್ಧ

**ಉದ್ದೇಶ:** ಮಕ್ಕಳಲ್ಲಿ ನಿಗಮನಾತ್ಮಕ ತರ್ಕ ಸಾಮರ್ಥ್ಯವನ್ನು ಬೆಳೆಸುವುದು.

**ಹಂತ:** ಐದನೇ ತರಗತಿಯ ನಂತರ

**ಕಾರ್ಯವಿಧಾನ:**

- ಮಕ್ಕಳು ಈ ಕೆಳಗಿನ ಪತ್ರವನ್ನು ಓದಿ ಅದರ ಕೊನೆಯಲ್ಲಿರುವ ಪ್ರಶ್ನೆಗಳನ್ನು ಉತ್ತರಿಸುತ್ತಾರೆ.
- ಆಮೇಲೆ ತರಗತಿಯ ಸಂಖ್ಯಾಬಲವನ್ನು ಅವಲಂಬಿಸಿ ತಲಾ ನಾಲ್ಕು ಅಥವಾ ಐದು ವಿದ್ಯಾರ್ಥಿಗಳಿರುವ ಗುಂಪುಗಳಾಗಿ ಕಲೆತು ತಮ್ಮ ಉತ್ತರಗಳನ್ನು ಚರ್ಚಿಸುತ್ತಾರೆ.
- ಕೊನೆಯಲ್ಲಿ ಶಿಕ್ಷಕರು ಒಂದೊಂದೇ ಪ್ರಶ್ನೆಯನ್ನು ಎತ್ತಿಕೊಂಡು ಉತ್ತರಗಳು ಸರಿಯೊ ತಪ್ಪೊ ಎಂಬುದನ್ನು ಲೆಕ್ಕಿಸದೆ ಪ್ರತಿ ಉತ್ತರದ ಹಿಂದಿನ ತರ್ಕದ ಕಡೆ ವಿದ್ಯಾರ್ಥಿಗಳ ಗಮನವನ್ನು ಸೆಳೆಯುತ್ತಾರೆ. ವಾಸ್ತವವಾಗಿ ಇಲ್ಲಿ ಉತ್ತರವು ಸರಿಯೊ ತಪ್ಪೊ ಎಂಬುದು ಮುಖ್ಯವಲ್ಲ; ಉತ್ತರಗಳ ಹಿಂದಿನ ತರ್ಕ ಏನೆಂಬುದೇ ಮುಖ್ಯ.

ಡಿಸೆಂಬರ್ 25

*ಪ್ರೀತಿಯ ಮುನ್ನಿ,*

*ನೀನು ಒದ್ದೆಯಾಗದೆ ಸುರಕ್ಷಿತವಾಗಿ ಮನೆ ತಲುಪಿದೆ ಎಂದು ಭಾವಿಸುವೆ. ನಮ್ಮ ಹಲವಾರು ಸಂಬಂಧಿಕರನ್ನೂ ಸ್ನೇಹಿತರನ್ನೂ ಭೇಟಿಯಾಗಲು ನಿನಗೆ*

*ಸಾಧ್ಯವಾಯಿತೆಂದು ನನಗೆ ತುಂಬ ಸಂತೋಷವಾಗಿದೆ. ಅವರಿಗೂ ಪುಟ್ಟಿಯನ್ನು ಭೇಟಿಯಾಗಲು ಅವಕಾಶವಾಯಿತು.*

*ನಿನಗೊಂದು ಒಳ್ಳೆಯ ಸುದ್ದಿ ಹೇಳಲಿಕ್ಕಿದೆ. ನಾನು ನನ್ನ ವಿದ್ಯಾರ್ಥಿಗಳೊಂದಿಗೆ ಜನವರಿ 26 ರಂದು ಕೆಂಪುಕೋಟೆಗೆ ಬರಲಿದ್ದೇನೆ. ಮರುದಿನ ನಾನು ಹೊರಡುವ ಮೊದಲು ನಾವೆಲ್ಲ ಒಟ್ಟಿಗೇ ನಾಷ್ಟ ಮಾಡೋಣ. ಮನೆಯಲ್ಲಿ ಅಮ್ಮ ಒಬ್ಬಳನ್ನೇ ಬಿಟ್ಟು ಬರುವುದು ನನಗೆ ಇಷ್ಟವಿಲ್ಲ. ಅವಳನ್ನು ನನ್ನೊಡನೆ ಕರೆತರುವೆ. ಲಾಲ್ ಬಾಗಿನ ಪುಷ್ಪ ಪ್ರದರ್ಶನದ200 ಛಾಯಾಚಿತ್ರಗಳನ್ನೂ ಸಹ ತರಲೆ?*

*ಮತ್ತೆ ಭೆಟ್ಟಿಯಾಗೋಣ.*

**ಪ್ರಶ್ನೆಗಳು**: ಇಲ್ಲಿ ಕೆಲವು ಹೇಳಿಕೆಗಳಿವೆ. ಅವನ್ನು ಓದಿ, ಪ್ರತಿ ಹೇಳಿಕೆಗೂ ಇದು ಸಾಧ್ಯ/ಸತ್ಯ ಎಂದು ನಮಗೆ ಖಚಿತವಿದೆಯೆ, ಇದು ಸಾಧ್ಯವೇ ಇಲ್ಲ/ ಸತ್ಯವಲ್ಲ ಎಂದು ಖಚಿತವಿದೆಯೆ, ಅಥವಾ ಈ ಸಾಧ್ಯತೆಯನ್ನು ಕುರಿತು ಖಚಿತತೆ ಇಲ್ಲವೆ – ಎಂಬುದನ್ನು ಬರೆಯಿರಿ.

| **ಹೇಳಿಕೆಗಳು** | **ಸಾಧ್ಯ / ಸಾಧ್ಯವಿಲ್ಲ / ಸಾಧ್ಯತೆಯನ್ನು ಕುರಿತು ಖಚಿತತೆ ಇಲ್ಲ** |
|---|---|
| ಈ ಪತ್ರವನ್ನು ಬರೆದಿರುವುದು ಒಬ್ಬ ಹೆಣ್ಣು. | |
| ಮುನ್ನಿ ಮತ್ತು ಈ ಪತ್ರವನ್ನು ಬರೆದವರು ಸಂಬಂಧಿಕರು. | |
| ಮುನ್ನಿಗೆ ಪುಷ್ಪ ಪ್ರದರ್ಶನ ಇಷ್ಟ. | |
| ಮುನ್ನಿ ವಾಸವಾಗಿರುವುದು ದಿಲ್ಲಿಯಲ್ಲಿ. | |
| ಮುನ್ನಿಗೊಂದು ಮಗುವಿದೆ. | |

| | |
|---|---|
| ಈ ಪತ್ರವನ್ನು ಬರೆದವರು ಒಬ್ಬ ಶಿಕ್ಷಕರು. | |
| ಪತ್ರವನ್ನು ಬರೆದವರು ವಿದ್ಯಾರ್ಥಿಗಳನ್ನು ಬೆಂಗಳೂರಿನಿಂದ ದಿಲ್ಲಿಗೆ ಕರೆದೊಯ್ಯುತ್ತಿದ್ದಾರೆ. | |
| ಲಾಲ್ ಬಾಗಿನಲ್ಲಿ ಸುಮಾರು 200 ಪುಷ್ಪ ಪ್ರದರ್ಶನಗಳು ನಡೆದಿವೆ. | |
| ಮಗುವನ್ನು ಯಾರೂ ನೋಡಿರಲಿಲ್ಲ. | |
| ಪತ್ರ ಬರೆದವರು ಗಣರಾಜ್ಯೋತ್ಸವದ ಆಚರಣೆಯನ್ನು ನೋಡಲು ವಿದ್ಯಾರ್ಥಿಗಳನ್ನು ಕರೆದೊಯ್ಯುತ್ತಿದ್ದಾರೆ | |
| ಪುಷ್ಪ ಪ್ರದರ್ಶನದ ಪುಷ್ಪಗಳ ಛಾಯಾಚಿತ್ರಗಳನ್ನು ಈ ಪತ್ರ ಬರೆಯುವ ಹೊತ್ತಿಗೆ ಇನ್ನೂ ತೆಗೆದಾಗಿಲ್ಲ. | |
| ಮುನ್ನಿ ಮನೆಗೆ ಹೋಗುವಾಗ ಮಳೆ ಸುರಿಯುತ್ತಿತ್ತು. | |

**ಫಲಿತಾಂಶ:**

ವಿದ್ಯಾರ್ಥಿಗಳು ತಮ್ಮ ಗಣಿತೀಯ ಮತ್ತು ವೈಜ್ಞಾನಿಕ ಚಿಂತನೆಯ ಕೌಶಲ್ಯಗಳನ್ನು (ಇಲ್ಲಿ ವೈಜ್ಞಾನಿಕ/ಗಣಿತೀಯ ಎಂಬುದು ವಿಜ್ಞಾನ ಅಥವಾ ಗಣಿತ ಅಧ್ಯಯನ ವಿಷಯಗಳಿಗೆ ಮಾತ್ರ ಸೀಮಿತವಾಗಿಲ್ಲ) ಬೆಳೆಸಿಕೊಳ್ಳುವ ಪ್ರಕ್ರಿಯೆಯಲ್ಲಿ ನಿಗಮನಾತ್ಮಕ ತರ್ಕವನ್ನು ಅನ್ವಯಿಸಿಕೊಳ್ಳುವುದನ್ನೂ, ಸಮಂಜಸವಾದ ತೀರ್ಮಾನಗಳಿಗೆ ಬರಲು ಲಭ್ಯವಿರುವ ಸಂಗತಿಗಳನ್ನು ಬಳಸಿ ತರ್ಕಬದ್ಧವಾಗಿ ಯೋಚಿಸುವುದನ್ನೂ ಕಲಿಯುತ್ತಾರೆ.

**ದೇವಕಿ ಲಕ್ಷ್ಮೀನಾರಾಯಣ** ಅವರು ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದ ಮುಖ್ಯಸ್ಥರಾಗಿದ್ದಾರೆ. ಈ ಪ್ರತಿಷ್ಠಾನವನ್ನು ಸೇರುವ ಮೊದಲು ಅವರು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆಯಲ್ಲಿ ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ಕಾಲ ಕೆಲಸ ಮಾಡಿದ್ದರು. ಅವರು ಮೈಸೂರು ವಿಶ್ವವಿದ್ಯಾಲಯದಿಂದ ಮನೋವಿಜ್ಞಾನದಲ್ಲಿ ಡಾಕ್ಟರೇಟ್ ಪದವಿಯನ್ನೂ, ನೆದರ್ಲ್ಯಾಂಡಿನ ಗ್ರೋನಿಂಗನ್ ವಿಶ್ವವಿದ್ಯಾಲಯದಿಂದ ಭಾಷಾ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಯನ್ನು ಪಡೆದಿದ್ದಾರೆ.

devaki@azimpremjifoundation.org

**ಚಟುವಟಿಕೆ 2:** ಹೆಸರಿನ ಆಟ

**ಉದ್ದೇಶಗಳು:**

- ಸುತ್ತಲಿನ ಪದಗಳ ಕುರಿತು ಪ್ರಜ್ಞಾಪೂರ್ವಕವಾಗಿ ಯೋಚಿಸುವುದು.
- ಪದಗಳನ್ನು ವರ್ಗೀಕರಿಸುವುದು
- ನಾಮಪದ ಪರಿಕಲ್ಪನೆಯನ್ನು ಗ್ರಹಿಸಲು ಲಕ್ಷಣ ಮಾದರಿಯೊಂದನ್ನು ರೂಪಿಸುವುದು.

**ಹಂತ:** 2, 3ನೇ ತರಗತಿ

**ಸಾಮಗ್ರಿ:** ಬೋರ್ಡ್, ಚಾಕ್, ನೋಟ್ಬುಕ್ ಗಳು ಮತ್ತು ಪೆನ್ಸಿಲ್ ಗಳು.

**ಕಾರ್ಯವಿಧಾನ:** ಈ ಚಟುವಟಿಕೆಯನ್ನು ಸಣ್ಣ ಗುಂಪುಗಳಲ್ಲಾದರೂ ಮಾಡಬಹುದು ಅಥವಾ ಇಡೀ ವರ್ಗವನ್ನು ಒಳಗೊಳ್ಳುವಂತೆಯೂ ಮಾಡಬಹುದು. ಸಣ್ಣ ಗುಂಪು-ಗಳಲ್ಲಾದರೆ ಹಲವು ಸಂಗತಿಗಳನ್ನು ಮಕ್ಕಳೇ ನೋಡಿ ಕೊಳ್ಳಬಹುದಾದ್ದರಿಂದ ನಿರ್ವಹಣೆ ಸುಲಭವಾಗುತ್ತದೆ.

1. ಮಕ್ಕಳಿಗೆ ತಮ್ಮ ನೋಟ್ಬುಕ್ ನಲ್ಲಿ ಈ ಕೆಳಗಿನಂತೆ ನಾಲ್ಕು ಕಾಲಂಗಳನ್ನು ಮಾಡಲು ಹೇಳಿ.

2. 1. ಹೆಸರು, 2. ಸ್ಥಳ, 3. ವಸ್ತು, 4. ಪ್ರಾಣಿ. ಹೆಸರಿನ ಕಾಲಂನಲ್ಲಿ ಅವರು ಯಾವುದೇ ವ್ಯಕ್ತಿಯ, ಹುಡುಗ ಅಥವಾ ಹುಡುಗಿಯ ಹೆಸರನ್ನೂ, ಸ್ಥಳ ಕಾಲಂನಲ್ಲಿ ಯಾವುದಾದರೊಂದು ಪಟ್ಟಣದ ಹೆಸರನ್ನೂ, ವಸ್ತು ಕಾಲಂನಲ್ಲಿ ಯಾವುದೇ ವಸ್ತುವಿನ ಹೆಸರನ್ನೂ ಮತ್ತು ಪ್ರಾಣಿ ಕಾಲಂನಲ್ಲಿ ಯಾವುದಾದರೂ ಪ್ರಾಣಿಯ ಹೆಸರನ್ನೂ ಬರೆಯಬೇಕೆಂದು ಸ್ಪಷ್ಟಪಡಿಸಿ. ಇಲ್ಲಿ ಮಾರ್ಪಾಟು ಮಾಡಿಕೊಳ್ಳಲು ಸಾಕಷ್ಟು ಆಸ್ಪದವಿದೆ.

3. ಪ್ರತಿ ಕಾಲಂನಲ್ಲೂ ಮೇಲೆ ಹೇಳಿದ ವರ್ಗಕ್ಕೆ ಸೇರಿದ ಒಂದು ಹೆಸರನ್ನು ಅವರು ಬರೆಯಬೇಕಾಗುತ್ತದೆ.

ಎಲ್ಲಾ ಹೆಸರು(ಗಳು) ನಿರ್ದಿಷ್ಟ ಅಕ್ಷರದಿಂದಲೇ ಆರಂಭವಾಗಬೇಕು ಮತ್ತು ಆ ಅಕ್ಷರ ಯಾವುದೆಂದು ಗುಂಪಿನ/ತರಗತಿಯ ಯಾವುದಾದರೊಂದು ಮಗುವೇ ನಿರ್ಧರಿಸಬೇಕು. ಉದಾಹರಣೆಗೆ ಒಂದು ಮಗು "ಸ" ದಿಂದ ಶುರುವಾಗುವ ಪದಗಳನ್ನು ಬರೆಯಬೇಕು ಎನ್ನಬಹುದು. ಈಗ ಎಲ್ಲರೂ ಪ್ರತಿ ಕಾಲಂನಲ್ಲೂ "ಸ" ದಿಂದ ಶುರುವಾಗುವ ಪದಗಳನ್ನೇ ಬರೆಯಬೇಕು. ಉದಾಹರಣೆಗೆ,

| **ಹೆಸರು** | **ಸ್ಥಳ** | ಪ್ರಾಣಿ | **ವಸ್ತು** |
|---|---|---|---|
| ಸಂಜಯ | ಸಾಗರ | ಸಿಂಹ | ಸುತ್ತಿಗೆ |

ಆಟವನ್ನು ಪರಿಚಯಿಸುವ ಮೊದಲ ಸುತ್ತಿನ ನಂತರ ಅದನ್ನು ಕಾಲಮಿತಿಗೊಳಪಡಿಸಿ. ಯಾವ ಗುಂಪು ಮೊದಲು ಮುಗಿಸುತ್ತದೊ ಆ ಗುಂಪಿಗೆ ಉತ್ತರಗಳನ್ನು ಹೇಳುವ ಅವಕಾಶ ನೀಡಿ.

ಇನ್ನೊಂದು ಮಗು "ಈ" ಅಕ್ಷರವನ್ನು ನೀಡಬಹುದು. ಈಗ ಎಲ್ಲರೂ ಪ್ರತಿ ಕಾಲಂನಲ್ಲೂ "ಈ" ಅಕ್ಷರದಿಂದ ಆರಂಭವಾಗುವ ಪದಗಳನ್ನು ಬರೆಯಬೇಕು. "ಸ" ದಂತಹ ಅದೇ ಅಕ್ಷರವನ್ನೇ ಹೊಸ ಪದಗಳೊಂದಿಗೆ ಪುನರಾವರ್ತಿಸಲೂಬಹುದು. ಹೀಗೆ

ಈ ಚಟುವಟಿಕೆ ಮುಂದುವರಿಯುತ್ತದೆ. ಮಕ್ಕಳು ಎಷ್ಟು ಬೇಕೊ ಅಷ್ಟು ಪದಗಳನ್ನು ಬರೆಯಬಹುದು.

**ಚರ್ಚೆ:**

ಈ ಚಟುವಟಿಕೆಯನ್ನು ಅವಸರವಸರವಾಗಿ ಒಂದೇ ಪೀರಿಯಡ್‌ನಲ್ಲಿ ಮುಗಿಸಬೇಕೆಂದೇನೂ ಇಲ್ಲ. ಮಕ್ಕಳು ಇಷ್ಟಪಡುತ್ತಾರಾದರೆ ಇದನ್ನು ಕೆಲವು ದಿನಗಳವರೆಗೂ ಮುಂದುವರಿಸಬಹುದು. ಒಂದೇ ಅಕ್ಷರದಿಂದ ಆರಂಭವಾಗುವ ಹೊಸ ಹೆಸರುಗಳನ್ನು ಅವರು ಬರೆಯಬೇಕಾಗುವುದು ಒಂದು ಸವಾಲೇ ಸರಿ. ಇದರಿಂದ ಮಕ್ಕಳು ಪುಸ್ತಕಗಳು, ನಕಾಶೆಗಳು ಮುಂತಾದವುಗಳಲ್ಲಿ ಹುಡುಕಿ ತಮ್ಮ ಪದ ಸಂಗ್ರಹವನ್ನು ಹೆಚ್ಚಿಸಿಕೊಳ್ಳುವ ಒತ್ತಾಯಕ್ಕೆ ಒಳಗಾಗುತ್ತಾರೆ.

ಮಕ್ಕಳಿಗೆ ಇದರ ಸರಿಯಾದ ತಿಳಿವಳಿಕೆ ಬಂದಮೇಲೆ, ಶಿಕ್ಷಕರು ನಾಮಪದದ ಪರಿಕಲ್ಪನೆಯನ್ನು ಸಹ ಪರಿಚಯಿಸಬಹುದು. ಈ ಚಟುವಟಿಕೆಯು ವರ್ಣ ಮತ್ತು ವರ್ಣಧ್ವನಿಯ ನಡುವಿನ ಸಂಬಂಧವನ್ನು ಗ್ರಹಿಸಲು ಕೂಡ ನೆರವಾಗಬಹುದು.

**ರಜನಿ ದ್ವಿವೇದಿಯವರು** ಭಾಷೆ ಮತ್ತು ಭಾಷಾ ಬೋಧನೆಯಲ್ಲಿ ಆಸಕ್ತರು. ಸದ್ಯ ಅವರು ಉದಯಪುರದ ವಿದ್ಯಾಭವನ ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾರೆ.rajini@vidyabhawan.org

**ಚಿಂತನಾತ್ಮಕ ಪ್ರಶ್ನೆಗಳು:**

1. ವರ್ತಮಾನ ಪತ್ರಿಕೆಯ ಯಾವುದೇ 50 ಪದಗಳ ಪರಿಚ್ಛೇದವೊಂದನ್ನು ಆಯ್ದುಕೊಂಡು ಚಟುವಟಿಕೆ-1 ರ ಮಾದರಿಯ ಭಾಷಾ ಆಟವನ್ನು ರೂಪಿಸಿ.
2. ಚಟುವಟಿಕೆ-2 ರ ಉದ್ದೇಶ ನಾಮಪದ ಪರಿಕಲ್ಪನೆಯನ್ನು ಗ್ರಹಿಸಲು ಮಕ್ಕಳಿಗೆ ನೆರವಾಗುವುದು. ಇದರ ಹೊರತಾಗಿ ಬೇರೆ ಯಾವ ಯಾವ ಕೌಶಲ್ಯಗಳನ್ನು ಬೆಳೆಸಲು ಈ ಚಟುವಟಿಕೆಯನ್ನು ಬಳಸಬಹುದು?

**ಅನುವಾದ**: ಮಂಜುನಾಥ್ ಹೆಗಡೆ

**ಪರಿಶೀಲನೆ**: ಟಿ.ಎನ್.ವಾಸುದೇವಮೂರ್ತಿ

**ಮೂಲ**: *Language and Language Teaching* Volume 4 Number 2 Issue 8 July 2015